**ಹೆಚ್ಚುವರಿ ಸಿವಿಲ್ ಮತ್ತು ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಓ.ಎಸ್. ನಂಬರಃ 6/2021**

**ಸಾಕ್ಷಿಃ ಸಿ.ಡಬ್ಲ್ಯೂಃ 01**

| | |
|---|---|
| ಸಾಕ್ಷಿದಾರರ ಹೆಸರು | : ವಾಸುದೇವ ಮೊಗೇರ್ |
| ತಂದೆಯ ಹೆಸರು | : ಗಣಪತಿ ಮೊಗೇರ್ |
| ವಯಸ್ಸು | : 39 ವರ್ಷ |
| ಉದ್ಯೋಗ | : ತಾಲೂಕಾ ಸರ್ವೆಯರ್ |
| ವಾಸ್ತವ್ಯ | : ರಾಯಲ್ ಕೇರಿ, ಹೊನ್ನಾವರ |

**<u>ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ 06-03-2026</u>**

**<u>ಮುಖ್ಯ ವಿಚಾರಣೆಃ ನ್ಯಾಯಾಲಯದಿಂದ,</u>**

ಭಟ್ಕಳ ತಾಲೂಕಿನಲ್ಲಿ ನಾನು ಕಳೆದ 14ವರ್ಷಗಳಿಂದ ತಾಲೂಕಾ ಸರ್ವೆಯರ್ ಆಗಿ ಕೆಲಸ ಮಾಡುತ್ತಿದ್ದೇನೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ 09.09.2025 ರಂದು ದಾವಾ ಸ್ವತ್ತನ್ನು ಅಳತೆ ಮಾಡಿ ಗುರುತಿಸಲು ವಾದಿ ಮತ್ತು ಪ್ರತಿವಾದಿಯವರಿಗೆ ನೋಟಿಸು ನೀಡಿರುತ್ತೇನೆ. ಅದೇ ದಿನ ಬೆಳಿಗ್ಗೆ 10.30ಗಂಟೆ ಸಮಯದಲ್ಲಿ ನಾನು ದಾವಾ ಸ್ಥಳಕ್ಕೆ ಭೇಟಿ ನೀಡಿರುತ್ತೇನೆ. ಆಗ ವಾದಿ ಮತ್ತು ಪ್ರತಿವಾದಿ ಹಾಜರಿದ್ದರು. ನಾನು ವಾದಿ ಪ್ರತಿವಾದಿಗಳು ನೀಡಿದಂತಹ Memo of Instructions ನಂತೆ ಅಳತೆ ಕಾರ್ಯವನ್ನು ಮಾಡಿದ್ದು ನಂತರ ನಾನು ದಾವಾ ಸ್ವತ್ತಿನ ನಕ್ಷೆ ಮತ್ತು ವರದಿಯನ್ನು ತಯಾರಿಸಿ ಭೂ ದಾಖಲೆಗಳ ಸಹಾಯಕ ನಿರ್ದೇಶಕರು ಭಟ್ಕಳರವರಿಗೆ ನೀಡಿರುತ್ತೇನೆ. ಸಾಕ್ಷಿಯು ವಾದಿ ಮತ್ತು ಪ್ರತಿವಾದಿಯವರಿಗೆ ನೀಡಿದ ನೋಟಿಸಿನ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1 ಎಂದು, ಎರಡು ಅಂಚೆ ರಸೀದಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ.2 ಎಂದು, ವಾದಿ ಮತ್ತು ಪ್ರತಿವಾದಿಯರ ಹೇಳಿಕೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.3 ಎಂದು , ಸಾಕ್ಷಿಯು ನಕ್ಷೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.4 ಎಂದು ಗುರುತಿಸಲಾಯಿತು.

**<u>ಈ ಹಂತದಲ್ಲಿ ವಾದಿ ಮತ್ತು ಪ್ರತಿವಾದಿ ಪರ ವಕೀಲರುಗಳು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿಯನ್ನು ಕೇಳಿದ್ದು, ಅನುಮತಿ ನೀಡಲಾಗಿರುತ್ತದೆ.</u>**

**<u>ವಾದಿ ಮತ್ತು ಪ್ರತಿವಾದಿ ಪರ ವಕೀಲರುಗಳು ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು, ಪಾಟೀ ಸವಾಲನ್ನು ಮುಂದೂಡಲಾಯಿತು.</u>**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**ಸಹಿ ಇದೆ**

**ಹೆ.ನ್ಯಾ.ದಂ., ಭಟ್ಕಳ.**